‘ತಮಾಷೆಯಲ್ಲ... ನಿಜ್ವಾಗ್ಲೂ ಈ ಸಾಲುಗಳ್ಯಾವ್ದೂ ನಂದಲ್ಲ... ನನ್ ಫ್ರೆಂಡ್ ಬರ್ದಿದ್ದು. ಅವತ್ತು ನೀವು ಸ್ಟೇಟಸ್‌ನಲ್ಲಿರೋ ಸಾಲುಗಳು ನಿನ್ನದಾ? ಅಂತ ಕೇಳ್ದಾಗ ಇಲ್ಲ ಅಂತ ಹೇಳೋಕಾಗ್ಲಿಲ್ಲ. ಹ್ಮೂಂ ಅದ್ಬಿಟ್ಟೆ... ನೀವು ಸಾಲುಗಳನ್ನ ಬರೆದು ಮುಂದ್ವರೆಸು ಅಂದಾಗ ಪಕ್ಕದಲ್ಲಿದ್ದ ಫ್ರೆಂಡ್ ಹತ್ರ ಕೇಳ್ಕೊಂಡ್ ಬರಿತಿದ್ದೆ. ನಂಗೆ ಬರ್ದಿದನ್ನ ಓದೋದು ತುಂಬ ಇಷ್ಟ... ಆದ್ರೆ ಬರ್ಯೋಕೆ ಬರಲ್ಲ...’ ಎಂದು ಕಳಿಸಿಯೇಬಿಟ್ಟಳು..

‘ಸುಳ್ ಯಾಕೆ ಹೇಳ್ದೆ?’ ಆ ಕಡೆಯಿಂದ ಥಟ್ಟನೇ ಪ್ರಶ್ನೆ ಬಂದಿತು.

‘ಸುಳ್ ಹೇಳೋ ಉದ್ದೇಶ ನಂದಾಗಿರ್ಲಿಲ್ಲ... ನಿಮ್ಮನ್ನ, ನಿಮ್ ಬರಹಗಳನ್ನ ತುಂಬ ಪ್ರೀತಿಸ್ತೀನಿ. ಅದಕ್ಕೆ ಹೀಗ್ ಮಾಡ್ದೆ. ಮತ್ಯಾವ್ ಕೆಟ್ಟ ಉದ್ದೇಶವೂ ಇಲ್ಲ... ಅಪ್ಪನಾಣೆ...’ ಎಂದಳು.

ಈ ಅಪ್ಪನಾಣೆ ಯಾಕೆ ಸೇರಿಸಿದೆ? ಕಳಿಸಿದ ಮೇಲೆ ಪ್ರಶ್ನೆ ಕಾಡಿತು. ಅವನು ಈಗ ಏನೆನ್ನಬಹುದು? ಕೋಪಿಸಿಕೊಳ್ಳುತ್ತಾನಾ? ನನ್ನನ್ನು ಬ್ಲಾಕ್ ಮಾಡಿಬಿಟ್ಟರೆ? ಈ ಸ್ನೇಹ ಹೀಗೆ ಮುಂದುವರೆಯುತ್ತದಾ? ಹೀಗೆ ನಾನಾ ಪ್ರಶ್ನೆಗಳು, ಆತಂಕಗಳು. ಆದರೆ ಐದು ನಿಮಿಷಗಳಾದರೂ ಆ ಕಡೆಯಿಂದ ಏನು ಉತ್ತರ ಬರದೇ ಹೋದಾಗ ಬಹುಶಃ ಇನ್ನೆಂದಿಗೂ ನನ್ನ ಜೊತೆ ಮಾತಾಡುವುದಿಲ್ಲವೇನೋ? ಎಂದುಕೊಂಡು ಸುಮ್ಮನಾಗಿ ಮುಖ ಹೊರಳಿಸಿದಳು. ಪಕ್ಕದವನು ಅವಳನ್ನೇ ನೋಡುತ್ತಿದ್ದ. ಅವಳಿಗೆ ಹೇಗೇ ಪ್ರತಿಕ್ರಯಿಸಬೇಕೋ ತಿಳಿಯಲಿಲ್ಲ.

ಅಷ್ಟರಲ್ಲಿ ಅವನು–

‘ನಾನು ಆಗ್ಲಿಂದ ನಿಮ್ ಫೋನೆ ನೋಡ್ತಿದ್ದೆ...’ ಎಂದ.

ಅವಳು ಪ್ರಶ್ನಾರ್ಥಕವಾಗಿ ನೋಡಿದಳು.

‘ಎಷ್ಟ್ ಕೊಟ್ಟದಿರಿ ಫೋನಿಗೆ? ಯಾವ್ ಸೆಟ್ಟು?’

‘ಲೆನೊವೊ, ಏಳುವರೆ ಸಾವ್ರ...’ ಎಂದಳು.

‘ಹೌದಾ, ಚೊಲೋ ಬರ್ತದಾ?’ ಕೇಳಿದ.

ಅದೆಲ್ಲಿಗೂ ಬರುವುದಿಲ್ಲ ಎಂದು ಉತ್ತರಿಸಬೇಕೆನಿಸಿತು. ಆದರೆ ತನಗ್ಯಾಕೆ ಬೇಕು ಈ ಅಧಿಕಪ್ರಸಂಗ ಎಂದುಕೊಂಡು:

‘ಹ್ಮೂಂ...’ ಎಂದಳು.

ಮತ್ತೆ ಅವನ ಮೆಸೇಜ್ ಬಂತೆ? ಎಂಬ ಹುಡುಕಾಟ, ಮೊಬೈಲ್ ವೈಬ್ರೇಟ್ ಆಗದಿದ್ದರೂ ಆಯಿತೆ? ಎಂದು ನೋಡಿ ಖಾತ್ರಿಪಡಿಸಿಕೊಳ್ಳುವ ಧಾವಂತ. ಊಹ್ಮೂಂ. ಲಾಸ್ಟ್ ಸೀನ್ ಒಂದು ಇಪ್ಪತ್ತೈದು ಪಿಎಮ್ ಎಂದಿರುವುದು ನೋಡಿ ಮುಖ ಕಿಟಕಿ ಕಡೆಗೆ ಹೊರಳಿಸಿದಳು, ಪಕ್ಕದವನ ದನಿ ಕಿವಿ ತುಂಬಿತು...

‘ನನ್ ಮಗ್ಳು ಧಾರ್ವಾಡದಲ್ಲಿ ಬಿ.ಎಡ್ ಓದ್ತಿದಾಳೆ. ಹಿಂಗಿದ್ದೆ ದೊಡ್ ಫೋನ್ ಬೇಕು ಹೇಳಿ ಫೋನ್ ಮಾಡ್ದಾಗೆಲ್ಲ ಹೇಳ್ತಾಳೆ... ಅದ್ಕೆ ನಿಮ್ ಕೈಲಿರು ಫೋನನ್ನೇ ನೋಡ್ತಿದ್ದೆ. ಹಿಂಗಿದ್ದೆ ಕೊಡ್ಸುವ ಹೇಳಿ.’ ಅವಳು ಪಕ್ಕನೇ ತಿರುಗಿದಳು. ಅವನು ನಕ್ಕ. ಅಷ್ಟು ಹೊತ್ತಿನಿಂದ ಈ ಮುಗ್ಧ ಕನಸು ಹೆಣೆಯುತ್ತಿರುವ ಅಪ್ಪನನ್ನಾ ನಾನು ಬೈದುಕೊಳ್ಳುತ್ತಿದ್ದುದು? ಕಣ್ಣ ಹನಿಗಳನ್ನು ಅಡಗಿಸಿಕೊಂಡು,

‘ಕೊಡ್ಸಿ. ಬೇಕಾಗತ್ತೆ...’ ಎಂದಳು.

ಅವನು ಮತ್ತೇನೋ ಕೇಳುವವನಿದ್ದ, ಅಷ್ಟರಲ್ಲಿ ಮೊಬೈಲ್‌ನ ಲಾಂಗ್ ವೈಬ್ರೇಟ್ ಸದ್ದಿಗೆ